




[ಬೌದ್ಧಧರ್ಮದಿಂದ ಹುಟ್ಟಿಬಂದ ಶಾಖೆಗಳು ಅನೇಕ. ಟಿಬೆಟ್ಟಿನ ಒಂದು ಬೌದ್ಧಪಂಗಡಕ್ಕೆ ಸೇರಿದ ಸಂತನ ಮಾರ್ಮಿಕ ಜೀವನದ ಪರಿಚಯವನ್ನು ಮಾಡಿಕೊಟ್ಟಿರುವ ಲೇಖಕರು ಮೈಸೂರು ಶ್ರೀರಾಮಕೃಷ್ಣ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ]

**ಟಿಬೆಟ್ಟಿನ** ದಕ್ಷಿಣಪ್ರಾಂತ ಗುಂಗ್‌ಥಂಗ್‌ನ ಕ್ಯಂಗ್–ತ್ಸ ಎಂಬ ಊರಿನಲ್ಲಿ ಉತ್ತರ ಟಿಬೆಟ್ಟಿನಿಂದ ಬಂದ ಒಂದು ಕುಟುಂಬ ನೆಲೆಸಿತು. ಅದರ ಯಜಮಾನ ಮಿಲ–ದೋರ್ಜೆ–ಸಿಂಗೆ ತನ್ನ ಮಗ ಮಿಲ–ಶೆರಾಬ್–ಗ್ಯಾಲ್‌ತ್ಸೆನ್‌ಗೆ ಅದೇ ಊರಿನ ರಾಜ ವಂಶದ ಕನ್ಯೆ ಕರ್ಮೊ ಕ್ಯೆನ್ ಎಂಬವಳೊಂದಿಗೆ ಮದುವೆ ಮಾಡಿದ. ಗ್ಯಾಲ್‌ತ್ಸೆನ್‌ಗೆ ಇಬ್ಬರು ಮಕ್ಕಳು—ಮಿಲರೇಪ ಹಿರಿಯವನು; ಪೇತ ಗೊಯಿಂಕಿಟ್ ಕಿರಿಯವಳು. ಗ್ಯಾಲ್‌ತ್ಸೆನ್ ಉಣ್ಣೆ ವ್ಯಾಪಾರ ಮಾಡಿ ಸಾಕಷ್ಟು ಶ್ರೀಮಂತನಾದ. ಆದರೆ ದುರದೃಷ್ಟವಶಾತ್ ತೀರಿಕೊಂಡ. ಅವನ ಆಸ್ತಿಪಾಸ್ತಿಯನ್ನೆಲ್ಲ ಅವನ ತಮ್ಮ ನೋಡಿಕೊಳ್ಳುತ್ತಿದ್ದ. ಮಿಲರೇಪ ವಯಸ್ಸಿಗೆ ಬಂದಾಗ ಅದೆಲ್ಲವನ್ನೂ ಅವನಿಗೆ ಒಪ್ಪಿಸಬೇಕೆಂದು ಕರಾರಾಗಿತ್ತು. ಆದರೆ ಅವನ ಚಿಕ್ಕಪ್ಪ ಮಾತುಕೊಟ್ಟಂತೆ ನಡೆದುಕೊಳ್ಳಲಿಲ್ಲ; ಗ್ಯಾಲ್‌ತ್ಸೆನ್‌ನ ಆಸ್ತಿಯನ್ನೆಲ್ಲ ದೋಚಿದ. ಕರ್ಮೊಕ್ಯೆನ್‌ಗೆ ಯಾರೂ ಸಹಾಯ ಮಾಡಲಿಲ್ಲ. ನಿಸ್ಸಹಾಯಕಳಾದ ಅವಳು ಕಡುಬಡತನದಿಂದ ಹೇಗೋ ಜೀವನ ನಡೆಸುತ್ತಿದ್ದಳು. ಅಂಥ ಕಷ್ಟದ ನಡುವೆಯೂ ಮಿಲರೇಪನನ್ನು ಓದಿಸಿದಳು.

ಈ ನಡುವೆ ಮಿಲರೇಪ ತಾನು ಓದುತ್ತಿದ್ದ ಮಠದ ಲಾಮಾನೊಂದಿಗೆ ಒಂದು ಔತಣಕೂಟದಲ್ಲಿ ಚಾಂಗ್–ಮದ್ಯ ಕುಡಿದ; ಅದರ ಲಹರಿಯಲ್ಲಿ ಹಾಡುತ್ತಿದ್ದ ಅವನನ್ನು ಕಂಡು ಅವನ ತಾಯಿ ದುಃಖಿಸಿದಳು; ಕೋಪದಿಂದ ಹೊಡೆದಳು. ದುಃಖದಿಂದ ಮಿಲರೇಪ ತಾಯಿಯ ಇಚ್ಛೆಯೇನು—ಅದನ್ನು ತಾನು ಪೂರೈಸುವುದಾಗಿ ಹೇಳಿದ. ಆಗ ಕರ್ಮೊಕ್ಯೆನ್, ತಮಗೆ ದ್ರೋಹ ಬಗೆದ ಮಿಲರೇಪನ ಚಿಕ್ಕಪ್ಪ–ಚಿಕ್ಕಮ್ಮ ಹಾಗೂ ಅವರ ಕಡೆಯವರನ್ನು ಮಿಲರೇಪ ನಾಶಮಾಡಿದಾಗಲೇ ತನಗೆ ನೆಮ್ಮದಿ



ಎಂದಳು. ಆದರೆ ಶಕ್ತಿ ಸಾಮರ್ಥ್ಯಗಳಿಲ್ಲದ್ದರಿಂದ ಅವನು ಮಾಂತ್ರಿಕ ವಿದ್ಯೆ ಕಲಿತು ಅವರನ್ನು ನಾಶಮಾಡಬೇಕೆಂದಳು. ತಾಯಿಯ ಅಭಿಲಾಷೆಯಂತೆ, ಅವಳ ಆಶೀರ್ವಾದ ಪಡೆದು ಮಿಲರೇಪನು ಯಲುಗಂಗ್ ಕ್ಯೋಪೊಕ್ ಎಂಬ ಊರಿಗೆ ಬಂದ. ಅಲ್ಲಿನ ಪ್ರಸಿದ್ಧ ಮಾಂತ್ರಿಕ ಯುಂಗ್‌ಟನ್ ಟ್ರೋಗ್ಯಲ್‌ನಿಂದಲೂ, ಅವನ ಮಿತ್ರ ಖುಲುಂಗ್‌ಯೊಂಟನ್ ಗ್ಯಾಟ್ಸೊ ಎಂಬ ಇನ್ನೊಬ್ಬ ಗುರುವಿನಿಂದಲೂ ಮಾರಕವಾದ ಮಾಂತ್ರಿಕ ವಿದ್ಯೆಗಳನ್ನು ಕಲಿತ. ಮೊದಲು ಅವನು ತನ್ನ ವಿದ್ಯೆಯನ್ನು ಪ್ರಯೋಗಿಸಿ ತನ್ನ ಚಿಕ್ಕಪ್ಪನ ಕಡೆಯವರಲ್ಲಿ ಮೂವತ್ತೈದು ಜನರನ್ನು ಕೊಂದ. ಅವನ ಚಿಕ್ಕಪ್ಪ ಮತ್ತು ಚಿಕ್ಕಮ್ಮ ಇಬ್ಬರು ಮಾತ್ರ ಸಾಯಲಿಲ್ಲ. ಇದರಿಂದ ಕುಪಿತರಾದ ಊರಿನ ಜನರು ಮೊದಲು ಮಿಲರೇಪನನ್ನು ಕೊಂದು, ಅನಂತರ ಅವನ ತಾಯಿಯನ್ನು ಕೊಲ್ಲಲು ಸಂಚು ಹೂಡಿದರು. ಆಗ ತಾಯಿಯ ಆಣತಿಯಂತೆ ಮಿಲರೇಪ ಪ್ರಚಂಡ ಬಿರುಗಾಳಿಯನ್ನು ಎಬ್ಬಿಸಿ ಆ ಊರಿನ ಜನರ ಸರ್ವಸ್ವವನ್ನೂ ನಾಶಮಾಡಿದ.

ಮಿಲರೇಪನ ತಾಯಿಯ ಸೇಡೇನೋ ತೀರಿತು. ಆದರೆ ಮಿಲರೇಪನ ಹೃದಯ ಪಶ್ಚಾತ್ತಾಪದಿಂದ ಬೆಂದುಹೋಯಿತು. ಹಲವರ ಸಾವಿಗೆ, ಹಲವರ ನಾಶಕ್ಕೆ ಕಾರಣನಾದ ಪರಮ ಪಾತಕಿ ತಾನು ಎಂದುಕೊಂಡ. ಸತ್ಪಥದಲ್ಲಿ ನಡೆದು ಧಾರ್ಮಿಕ

ಅಧ್ಯಯನ ನಡೆಸಿ, ಉತ್ತಮ ಜೀವನ ನಡೆಸಬೇಕೆಂದು ಆತ ಬಯಸಿದ. ಈ ಕುರಿತು ತನ್ನ ಗುರು ಯುಂಗ್‌ಟನ್ ಟ್ರೊಗ್ಯಲ್‌ಗೆ ಹೇಳಿ, ತನಗೆ ದಾರಿ ತೋರಿಸಿರೆಂದು ಪ್ರಾರ್ಥಿಸಿಕೊಂಡ. ಟ್ರೊಗ್ಯಲ್ ಅವನನ್ನು ನರ್ ಗ್ರಾಮದ ರೊಂಗ್ ಟೊಂಗ್ ಲ್ಹಗನಲ್ಲಿಗೆ ಕಳುಹಿಸಿದ. ಅವನ ಮುಂದೆ ನಮಸ್ಕರಿಸಿ, ಅವನಿಗೆ ತನ್ನೆಲ್ಲವನ್ನೂ ಸಮರ್ಪಿಸಿಕೊಂಡ ಮಿಲರೇಪ. ತನಗೆ ಮುಕ್ತಿ ದೊರಕಿಸಿಕೊಡುವ ವಿದ್ಯೆಯನ್ನು ನೀಡಿ ಎಂದು ಕೇಳಿಕೊಂಡ. ರೊಂಗ್ ಟೊಂಗ್ ಲ್ಹಗ 'ಆಗಲಿ' ಎಂದು ಅವನಿಗೆ ಮಂತ್ರೋಪದೇಶ ಮಾಡಿದ. ಆದರೆ ಎಷ್ಟು ಸಾಧನೆ ಮಾಡಿದರೂ ಮಿಲರೇಪನಿಗೆ ಸಿದ್ಧಿಯಾಗಲಿಲ್ಲ. ಆಗ ಗುರು, "ನೀನು ಸಾಕಷ್ಟು ಪಾಪ ಮಾಡಿರುವೆ. ನಿನ್ನನ್ನು ಮಾರ್ಪಡಿಸಲು ನನ್ನಿಂದಾಗದು. ನಿನಗೆ ಮುಕ್ತಿಯ ವಿದ್ಯೆ ದೊರಕಿಸಿಕೊಡಬಲ್ಲ ಒಬ್ಬನೇ ಒಬ್ಬ ಗುರುವೆಂದರೆ ಲ್ಹೊಬ್ರಾಕ್‌ನಲ್ಲಿರುವ, ಶ್ರೇಷ್ಠ ಗುರು ನರೋಪನ ಪ್ರಿಯ ಶಿಷ್ಯ ಮಾರ್ಪ ಮಾತ್ರ" ಎಂದ. ಮಿಲರೇಪ ಅಲ್ಲಿಂದ ಲ್ಹೊಬ್ರಾಕ್‌ಗೆ ತೆರಳಿದ.

ಲ್ಹೊಬ್ರಾಕ್‌ಗೆ ಬಂದು ದಾರಿಯಲ್ಲಿ ಸಿಕ್ಕ ಎಲ್ಲರೊಡನೆಯೂ ಮಾರ್ಪನ ಬಗ್ಗೆ ಕೇಳಿದ ಮಿಲರೇಪ. ಯಾರಿಗೂ ಅವನ ಬಗ್ಗೆ ಗೊತ್ತಿರಲಿಲ್ಲ. ಕೊನೆಗೊಬ್ಬ ಹುಡುಗ, ನಿಜವಾಗಿ ಅವನು ಮಾರ್ಪನ ಮಗ— ಮಾರ್ಪನ ಮನೆ ಅಲ್ಲಿದೆಯೆಂದು ತೋರಿಸಿಕೊಟ್ಟ. ಮಿಲರೇಪ ಅಲ್ಲಿಗೆ ಹೋದಾಗ ಒಬ್ಬ ದೃಢಕಾಯದ ವ್ಯಕ್ತಿ ಹೊಲ ಉಳುತ್ತಿದ್ದ. ಅವನಲ್ಲಿ ಮಾರ್ಪನ ಬಗ್ಗೆ ಕೇಳಿದ, "ನನಗೆ ಅವನ ಬಗ್ಗೆ ಗೊತ್ತು. ಅವನಿಂದೇನಾಗ ಬೇಕು?" ಎಂದು ಆ ವ್ಯಕ್ತಿ ಕೇಳಿದ. ಮಿಲರೇಪ, "ನಾನೊಬ್ಬ ಪಾಪಿ; ಮಾಂತ್ರಿಕ ವಿದ್ಯೆಗಳನ್ನು ಪ್ರಯೋಗಿಸಿ ಹಲವು ವ್ಯಕ್ತಿಗಳನ್ನು ಕೊಂದ ಪರಮ ಪಾತಕಿ. ನನಗೆ ಮುಕ್ತಿ ನೀಡಬಲ್ಲ ವಿದ್ಯೆ ಕಲಿಯುವ ಆಸೆಯಾಗಿದೆ. ಅದಕ್ಕಾಗಿ ನಾನು ಮಾರ್ಪನ ಬಳಿಗೆ ಹೋಗುತ್ತಿದ್ದೇನೆ" ಎಂದ. "ಈ ಹೊಲದ ಉಳಿದ ಭಾಗವನ್ನೆಲ್ಲ ಉತ್ತುಕೊಡುವೆಯಾದರೆ ನಾನು ನಿನ್ನನ್ನು ಮಾರ್ಪನಿಗೆ ಪರಿಚಯಿಸಿಕೊಡುತ್ತೇನೆ" ಎಂದ ಆ ವ್ಯಕ್ತಿ. ಅದಕ್ಕೊಪ್ಪಿ ಮಿಲರೇಪ ಹೊಲದ ಉಳಿದರ್ಧ ಭಾಗವನ್ನೆಲ್ಲ ಉಳತೊಡಗಿದ. ಮೊದಲು ಅಲ್ಲಿ ಉಳುತ್ತಿದ್ದವನು ಹೊರಟುಹೋದ. ಮಿಲರೇಪ ಉತ್ತು ಮುಗಿಸಿದ. ಮೊದಲು ಅವನಿಗೆ ಮಾರ್ಪನ ಮನೆ ತೋರಿಸಿದ್ದ ಹುಡುಗ ಅಲ್ಲಿ ಮತ್ತೆ ಸಿಕ್ಕ; ಅವನೇ ಮಿಲರೇಪನನ್ನು ಮಾರ್ಪನ ಮನೆಗೊಯ್ದ.

ಅಲ್ಲಿ, ಹೊಲದಲ್ಲಿ ಉಳುತ್ತಿದ್ದ ವ್ಯಕ್ತಿ ಒಂದು ದಪ್ಪದ ಆಸನದ ಮೇಲೆ ಕುಳಿತಿದ್ದ. ಅವನು ಮಿಲರೇಪನನ್ನು ಕಂಡು, "ನಾನೇ ಮಾರ್ಪ. ನನಗೀಗ ನಮಸ್ಕರಿಸು" ಎಂದ. ಅವನಿಗೆ ನಮಸ್ಕರಿಸಿದ ಮಿಲರೇಪ ತನಗೆ ಊಟ, ವಸತಿ, ಬಟ್ಟೆ ನೀಡಿ ಮುಕ್ತಿದಾಯಕವಾದ ವಿದ್ಯೆಯನ್ನು ಉಪದೇಶಿಸಬೇಕೆಂದು ಪ್ರಾರ್ಥಿಸಿದ. ತನ್ನನ್ನು ಮನೋವಾಕ್ಕಾಯವಾಗಿ ತಮಗೆ ಸಮರ್ಪಿಸಿಕೊಂಡಿದ್ದೇನೆ ಎಂದ. ಆಗ ಮಾರ್ಪ "ನಿನಗೆ ಊಟ, ವಸತಿ, ಬಟ್ಟೆ ಹಾಗೂ ಪಾರಮಾರ್ಥಿಕ ವಿದ್ಯೆ ಎರಡನ್ನೂ ನೀಡಲು ನನ್ನಿಂದಾಗದು. ಊಟ, ವಸತಿ, ಬಟ್ಟೆ ಕೊಡುತ್ತೇನೆ, ಪಾರಮಾರ್ಥಿಕ ವಿದ್ಯೆಯನ್ನು ಬೇರೆಡೆ ಕಲಿತುಕೋ; ಅಥವಾ ಪಾರಮಾರ್ಥಿಕ ವಿದ್ಯೆ ಕೊಡುತ್ತೇನೆ, ಊಟ, ವಸತಿ, ಬಟ್ಟೆಯ ವ್ಯವಸ್ಥೆ ನೀನೇ ಮಾಡಿಕೋ. ಅಲ್ಲದೆ ಈ ಜೀವನದಲ್ಲೇ ನೀನು ಮುಕ್ತಿಯ ಪದವಿ ಗಳಿಸುವೆಯೋ ಇಲ್ಲವೋ ನನಗೆ ಸಂದೇಹವೇ" ಎಂದ. ಮಿಲರೇಪ, ತನಗೆ ಪಾರಮಾರ್ಥಿಕ ವಿದ್ಯೆಯನ್ನು ದಯಪಾಲಿಸಿ; ಊಟ, ವಸತಿ, ಬಟ್ಟೆಗಳನ್ನು ತಾನೇ ನೋಡಿಕೊಳ್ಳುತ್ತೇನೆ ಎಂದ. ಅವನು ಭಿಕ್ಷೆ ಬೇಡಿ ತನ್ನ ಊಟಬಟ್ಟೆಯನ್ನು ಸಂಪಾದಿಸುತ್ತಿದ್ದ.

(ಮುಂದುವರಿಯುವುದು)

## ಬುದ್ಧ, ಧಮ್ಮ, ಸಂಘ

ಇವುಗಳಿಗೆ ತ್ರಿಸರಣ ಅಂದರೆ ಇವುಗಳಿಗೆ ಶರಣು.

**ಬುದ್ಧ :** ಬುದ್ಧ ಎಂದರೆ ಜ್ಞಾನಿ, ಅರಿವು ಹೊಂದಿದವನು, ಸತ್ಯ ಸಾಕ್ಷಾತ್ಕಾರ ಹೊಂದಿದವನು, ಎಚ್ಚೆತ್ತವನು ಎಂದರ್ಥ. ತಾನು ಅರಿವನ್ನು ಹೊಂದಿ ಬುದ್ಧನಾದ ಮೇಲೆ, ಮೊಟ್ಟ ಮೊದಲು ಬೋಧಿಸಿದ್ದು "ಹೇಳಿದ ಮಾತ್ರಕ್ಕೆ ಯಾವುದೇ ಮಾತನ್ನು ಒಪ್ಪಿಕೊಳ್ಳಬೇಡಿ. ಕೇವಲ ಪಾರಂಪರಿಕ ಎಂದು ಯಾವುದನ್ನೂ ಒಪ್ಪಿಕೊಳ್ಳಬೇಡಿ. ಧರ್ಮಗ್ರಂಥಗಳು ಸಮ್ಮತಿಸಿವೆ ಎಂದಾಗಲಿ, ಊಹೆಯಿಂದಾಗಲಿ, ತಾರ್ಕಿಕತೆಯಿಂದ, ಪೂರ್ವಗ್ರಹಿಕೆ ಭಾವನೆಗಳಿಗೆ ಹೊಂದಿಕೊಳ್ಳುತ್ತವೆ ಎಂದಾಗಲಿ ಒಪ್ಪಿಕೊಳ್ಳಬೇಡಿ. ಋಷಿಗಳನ್ನು ಗೌರವಿಸುತ್ತೇವೆಂದು ಅವರು ಹೇಳಿದ್ದನ್ನೂ ಒಪ್ಪಿಕೊಳ್ಳಬೇಡಿ. ಇವು ನೈತಿಕವಾದವು, ದೋಷಮುಕ್ತವಾದವು, ಇವನ್ನು ಸ್ವೀಕರಿಸಿದಾಗ ಅಭ್ಯುದಯಕ್ಕೆ ಸುಖಕ್ಕೆ ಅನುಕೂಲವಾಗುತ್ತವೆ ಎಂದು ನಿಮಗೆ ಅರಿವಾದಾಗ ಅದರಂತೆ ನಡೆಯಿರಿ." ಕ್ರಿಯಾಶೀಲತೆಗೆ ತನ್ನನ್ನು ಮೊದಲು ಒಡ್ಡಿಕೊಂಡು ಆನಂತರ ತನ್ನನ್ನು ನಂಬಿದವರಿಗೆ ಹೇಳಿದ್ದರಿಂದಲೇ ಅವನು ಬುದ್ಧ.

**ಧಮ್ಮ:** ಧಮ್ಮ ಎಂದರೆ ಎತ್ತಿ ಹಿಡಿಯುವುದು ಅಥವಾ ತನ್ನಲ್ಲಿ ಧಾರಣ ಮಾಡಿಕೊಳ್ಳುವುದು. ಧಮ್ಮ ವಾಸ್ತವವಾಗಿ ದುಃಖದಿಂದ ಅಥವಾ ನೋವಿನಿಂದ ಬಿಡುಗಡೆ ಪಡೆಯುವ ಸಾಧನ. ಧರ್ಮ ಸಂಪೂರ್ಣವಾಗಿ ಮನುಷ್ಯನನ್ನು ಅವಲಂಬಿಸಿರುವಂಥದ್ದು. ಹುಟ್ಟು ಸಾವಿನ ಸಮಸ್ಯೆಯನ್ನು ವಿವರಿಸಲು ಬಳಸಲಾಗುವ ತತ್ತ್ವ ಧರ್ಮ. ಬದುಕಿನ ಕೆಡಕುಗಳಿಂದ ಬಿಡುಗಡೆ ಪಡೆಯುವುದಕ್ಕೆ ಮಾರ್ಗ ಕಂಡುಹಿಡಿದು ಅದರ ಒಳಗೆ ಹೊರಗೆ ಏನಿದೆ ಎಂಬುದನ್ನು ಬುದ್ಧ ಅತ್ಯಂತ ಸರಳ ಮಾತುಗಳಲ್ಲಿ ವಿವರಿಸಿದ ಮತ್ತು ಮುಕ್ತಿಯ ಅಪೂರ್ವ ಮಾರ್ಗವನ್ನು ತೋರಿಸಿದ.

**ಸಂಘ:** ಇದು ಭಿಕ್ಷು–ಭಿಕ್ಷುಣಿಯರ ಸಂಘ. ಯಾವುದೇ ಬಾಹ್ಯ ಆಕರ್ಷಣೆಗೆ ಒಳಗಾಗದೆ ಉನ್ನತ ಗುರಿಯಾದ ನಿರ್ವಾಣವನ್ನು ಹೊಂದಲು ಬದುಕನ್ನೆಲ್ಲ ಮೀಸಲಿಟ್ಟವರಿಗೆ ಅನುಕೂಲ ವಾತಾವರಣವನ್ನು ಈ ಸಂಘ ಕಲ್ಪಿಸುತ್ತದೆ.

ಹೀಗೆ ಈ ತ್ರಿಸರಣಗಳು ಸಾಧಕರಿಗೆ, ಸತ್ಯಾನ್ವೇಷಿಗಳಿಗೆ, ಭಿಕ್ಷುಗಳಿಗೆ ಆಶ್ರಯಸ್ಥಾನಗಳು.